

‘ಒಂದಾನೊಂದು ಕಾಲದಲ್ಲಿ’ ಸೆಟ್‌ನಲ್ಲಿ ಕಾರ್ನಾಡರೊಂದಿಗೆ ಶಂಕರ್‌ನಾಗ್ (ಬಲತುದಿ)

ದುರ್ಬಲ ಅಂಶಗಳೂ ಚಿತ್ರದಲ್ಲಿವೆ. ಛಾಯಾಗ್ರಹಣ ಮತ್ತು ಸಂಕಲನ ಊಹಿಸಲಸಾಧ್ಯ ಎನ್ನುವಷ್ಟು ದುರ್ಬಲವಾಗಿವೆ ಮತ್ತು ಸ್ಥಿರತೆಯನ್ನು ಹೊಂದಿಲ್ಲ (ಛಾಯಾಗ್ರಾಹಕ ಮತ್ತು ಸಂಕಲನಕಾರ ಇಬ್ಬರೂ ಆಸ್ಟ್ರೇಲಿಯನ್ನರು). ಚಿತ್ರಕಥೆಯೂ ದುರ್ಬಲವಾಗಿದೆ. ಚಿತ್ರದ ಉತ್ತರಾರ್ಧದಲ್ಲಿ ಕಥೆಯಲ್ಲಿನ ಎಲ್ಲ ಸಂಘರ್ಷ ಕರಗಿಹೋಗುತ್ತದೆ. ಇದೆಲ್ಲದರ ಹೊರತಾಗಿಯೂ ಚಿತ್ರದ ಗುಣಗಳನ್ನು ಮೆಚ್ಚಿಕೊಳ್ಳಬೇಕು. ಕಾರ್ನಾಡರ ಎರಡನೇ ಸಿನಿಮಾದ ಬಗ್ಗೆ ನಿರೀಕ್ಷೆಗಳು ಹುಟ್ಟುತ್ತವೆ’’. ಈ ವಿಚಾರದ ಮುಂದುವರಿದ ಭಾಗವೆನ್ನುವಂತೆ, ಅದೇ ದಿನ ರೇ ಅವರು ರಹಾ ಅವರಿಗೆ ಬರೆದಿರುವ ಮತ್ತೊಂದು ಪತ್ರದಲ್ಲಿ – ‘ಸಂಸ್ಕಾರದಲ್ಲಿ ಯಾವುದೇ ಬಗೆಯ ಸಿನಿಮಾ ತಜ್ಞತೆ ನನಗೆ ಕಾಣಿಸಲಿಲ್ಲ. ಗಾಂಭೀರ್ಯ, ಅಭಿರುಚಿ, ಧೈರ್ಯ ಮತ್ತು ನಾಟಕೀಯತೆಯ ಸೂಕ್ಷ್ಮಗಳಷ್ಟೇ ನನ್ನ ಗಮನ ಸೆಳೆದವು’. ಈ ಪತ್ರಗಳ ಭಾಗಗಳನ್ನು ಅನುವಾದ ಮಾಡಿ ಗಿರೀಶರಿಗೆ ಕಳುಹಿಸಿಕೊಟ್ಟೆ. ಮ್ಯಾಕ್ಸ್ ವಾನ್ ಸಿಡೊ ಜೊತೆಗಿನ ಹೋಲಿಕೆ ಅವರನ್ನು ರೋಮಾಂಚಿತರನ್ನಾಗಿಸಿದ್ದು ಸಹಜವೇ ಆಗಿತ್ತು.

1978ರಲ್ಲಿ ‘ಭಾರತೀಯ ಪನೋರಮಾ’ ಸಮಿತಿಯ ಸದಸ್ಯನಾಗಿ ‘ಒಂದಾನೊಂದು ಕಾಲದಲ್ಲಿ’ (ಸಿನಿಮಾದ ನಿರ್ಮಾಣ ಸಂದರ್ಭದಲ್ಲಿ, ತಾರಾಗಣವನ್ನು ‘ಸಾಂಬಾರ್ ಸಮುರಾಯ್’ ಎಂದು ನಾನು ಬಣ್ಣಿಸಿದ್ದೆ) ಚಿತ್ರವನ್ನು ನೋಡಿ ಆನಂದಿಸಿದ್ದೆ. ಕರ್ನಾಟಕ ಇತಿಹಾಸದ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ, ಹಣದಾಸೆಗಾಗಿ ಏನನ್ನೂ ಮಾಡಬಲ್ಲ ಕೆಲವು ಆಸೆಬಡುಕರು, ರಾಜಕೀಯ ಶಕ್ತಿಗಳನ್ನು ನಿಯಂತ್ರಿಸುವವರಿಗೆ ತಮ್ಮ ನಿಷ್ಠೆ ಬದಲಿಸಿದ್ದನ್ನು ಹಾಗೂ ‘ಹೋರಾಟಕ್ಕಾಗಿ ಹೋರಾಟ’ ಎನ್ನುವ ಸಂಸ್ಕೃತಿಯನ್ನು ಗಿರೀಶ್ ಅದ್ಭುತವಾಗಿ ಚಿತ್ರಿಸಿದ್ದರು. ತೊಂಬತ್ತರ ದಶಕದ ತಮ್ಮ ಭಾಷಣವೊಂದರಲ್ಲಿ ಅವರು, ಆಧುನಿಕ ಸೈನಿಕನೊಬ್ಬ ವಿವೇಕಶೂನ್ಯ ಹಾಗೂ ಹೃದಯಹೀನನಾಗಿ ಯಾಂತ್ರಿಕವಾಗಿ ಹೋರಾಡುವುದರ ಪರಿಕಲ್ಪನೆಯನ್ನು ತಮ್ಮ ಚಿತ್ರದೊಂದಿಗೆ ತಳಕು ಹಾಕಿದ್ದರು. ‘ಒಂದಾನೊಂದು ಕಾಲದಲ್ಲಿ’ ತನ್ನ ಕಾಲಕ್ಕಿಂತಲೂ ಬಹು ಮುಂದಿದ್ದ ಚಿತ್ರವಾಗಿತ್ತು. 1978ರ ಡಿಸೆಂಬರ್ 6ರಂದು ಗಿರೀಶ್ ನನಗೆ ಬರೆದ ಪತ್ರದಲ್ಲಿ – ‘‘ಒಂದಾನೊಂದು ಕಾಲದಲ್ಲಿ ಚಿತ್ರದ ಬಗ್ಗೆ ನೀವು ಪತ್ರದಲ್ಲಿ ಬರೆದುದು ನನ್ನನ್ನು ಹೇಗೆ ತಟ್ಟಿತು ಎನ್ನುವುದನ್ನು ನಾನು ಹೇಗೆ ಹೇಳಲಿ. ಇದೊಂದು ತಾಂತ್ರಿಕ ಸಾಧನೆಯ ಹಾಗೂ ಸ್ವಲ್ಪ ಮಟ್ಟಿಗೆ ‘ಕಮರ್ಷಿಯಲ್ ಫೈಟಿಂಗ್ ವ್ಯಾಪಾರಿ ಸಿನಿಮಾ’ ಎನ್ನುವುದು ಈ ಚಿತ್ರದ ಬಗ್ಗೆ ಕರ್ನಾಟಕದಲ್ಲಿನ ಬುದ್ಧಿಜೀವಿಗಳ ಸಾಮಾನ್ಯ ಅಭಿಪ್ರಾಯ. ಇದಕ್ಕೆ ಇನ್ನೊಂದು ಬದಿಯಲ್ಲಿ ಫೈಟಿಂಗ್ ಸಿನಿಮಾಗಳನ್ನು ಸಾಮಾನ್ಯವಾಗಿ ಇಷ್ಟಪಡುವ ಜನಸ್ತೋಮ ಕೂಡ ಚಿತ್ರದ ಬಗ್ಗೆ ನಿರುತ್ಸಾಹಗೊಂಡಿದೆ. ಈ ವಿರುದ್ಧಾರ್ಥಕ ಹಾಗೂ ಕಹಿ ಪ್ರತಿಕ್ರಿಯೆಗಳು ನನ್ನ ನಿರ್ಮಾಪಕರನ್ನು ದುಃಖಿತರನ್ನಾಗಿಸಿದೆ. ಇಂಥ ಸಂದರ್ಭದಲ್ಲಿ ನಿಮ್ಮಂಥವರ ಪ್ರತಿಕ್ರಿಯೆಗಳು ಯಾರೊಬ್ಬರ ನೈತಿಕತೆಯನ್ನಾದರೂ ಹೆಚ್ಚಿಸಬಲ್ಲವು. ತುಂಬಾ ಧನ್ಯವಾಗಳು. ಗಿರೀಶ್.’’

ಚಿತ್ರಗಳು: ಪ್ರಗತಿ ಅಶ್ವತ್ಥ ನಾರಾಯಣ